ಬಂಟ್ವಾಳ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ

ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ

ಸಿಸಿ ನಂ. 1413/2020

ಪ್ರಾಸಾ : 15

ಜಾಸಾ : 20

| | | |
|---|---|---|
| ಹೆಸರು | : | ಡಾ ಸುರೇಶ್ |
| ತಂದೆಯ ಹೆಸರು | : | ರಾಮಕೃಷ್ಣ ಭಟ್ |
| ಪ್ರಾಯ | : | 61 ವರ್ಷ |
| ಉದ್ಯೋಗ | : | ನಿವೃತ್ತ ಉಪನಿರ್ದೇಶಕ ಪಶುವೈದ್ಯ ಆಸ್ಪತ್ರೆ |
| ವಾಸಸ್ಥಳ | : | ಕೌಡಿಚಾರ್ ಪುತ್ತೂರು |

ದಿಃ 01/10/2024ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

07.09.2018 ರಿಂದ 17.08.2020 ರವರೆಗೆ ಪಶುವೈದ್ಯ ಆಸ್ಪತ್ರೆ ವಿಟ್ಲ ದಲ್ಲಿ ಸಹಾಯಕ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. 22.05.2020 ರಂದು ವಿಟ್ಲ ಆರಕ್ಷಕ ನಿರೀಕ್ಷಕರು ನೂರು ಹಸುಗಳ ಚರ್ಮಗಳು ಹಾಗೂ 8 ಜೀವಂತ ಹಸುಗಳು ಮತ್ತು ಎರಡು ಕೆ.ಜಿ ಹಸುವಿನ ಮಾಂಸಗಳು ಠಾಣೆಯಲ್ಲಿ ಇದ್ದು ಅವುಗಳನ್ನು ಪರಿಶೀಲಿಸಿ ದೃಡಪತ್ರ ನೀಡುವಂತೆ ಕೋರಿಕೆ ಪತ್ರ ಬರೆದಿರುತ್ತಾರೆ . ಅದೇ ದಿನ ವಿಟ್ಲ ಆರಕ್ಷಕ ಠಾಣೆಗೆ ಭೇಟಿ ಕೊಟ್ಟು ಎಂಟು ಜೀವಂತ ವಿವಿಧ ಜಾತಿಯ ಹಸುಗಳನ್ನು ಪರಿಶೀಲಿಸಿರುತ್ತೇನೆ. ಅಂದಾಜು ಎರಡು ಕೆ.ಜಿ ಮಾಂಸವನ್ನು ಮತ್ತು ಚರ್ಮಗಳನ್ನು ಸಹ ಪರಿಶೀಲಿಸಿರುತ್ತೇನೆ.

3. ಒಂದು ಕೆಂಪು ಬಣ್ಣದ ಗಿರ್ ಧನ, ಕಪ್ಪು ಬಿಳಿ ಬಣ್ಣದ ಹೆಚ್ ಎಫ್ ಧನ , ಕಪ್ಪು ಬಣ್ಣದ ಜರ್ಸಿ ಧನ , ಬಿಳಿ ಮಚ್ಚೆ ಹೊಂದಿದ ಕಂದು ಬಣ್ಣದ ನಾಟಿ ಧನ , ಕಪ್ಪು ಮತ್ತು ಕೆಲವು ಕಡೆ ಬಿಳಿ ಮಚ್ಚೆ ಹೊಂದಿರುವ ಹೆಚ್ ಎಫ್ ಧನ , ಕೆಂಪು ಮಿಶ್ರಿತ ಕಪ್ಪು ಬಣ್ಣದ ಜರ್ಸಿ ಧನ , ಕೆಂಪು ಮಿಶ್ರಿತ ಕಂದು ಬಣ್ಣದ ಜರ್ಸಿ ಧನ , ಬಿಳಿ ಮಚ್ಚೆ ಹೊಂದಿದ ಕಪ್ಪು ಬಣ್ಣದ ಹೆಚ್ ಎಫ್ ಕ್ರಾಸ್

ಧನ ಒಟ್ಟು ಎಂಟು ಜಾನುವಾರುಗಳು ಇದ್ದು ಅವು ಆರೋಗ್ಯವಾಗಿದ್ದವು ಎಂದು ದಿನಂಾಕ 22.05.2020 ರಂದದು ದೃಡಪತ್ರ ನೀಡಿರುತ್ತೇನೆ .

4. ದಿ. 06.06.2020 ರಂದು ನಾನು ಪರಿಶೀಲಿಸಿದ ಮಾಂಸ ಹಾಗೂ ಚರ್ಮಗಳು ದನದ ಮಾಂಸ ಹಾಗೂ ಚರ್ಮ ಹಾಗಿರುತ್ತದೆ ಎಂದು ದೃಡಪತ್ರ ನೀಡಿರುತ್ತೇನೆ . ಎರಡು ದೃಡಪತ್ರಗಳನ್ನು ನಿಪಿ-17 ಮತ್ತು ನಿಪಿ-18 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-17 (ಎ) ಮತ್ತು ನಿಪಿ-18(ಎ) ಎಂದು ಗುರುತಿಸಲಾಯಿತು .

<u>ಪಾಟೀ ಸವಾಲುಃ ಆರೋಪಿತರ ಪರಃ ಶ್ರೀ ಟಿ ಆರ್ ವಕೀಲರಿಂದಃ</u>

5. ಬೆಳಿಗ್ಗೆ 10.00 ರಿಂದ 11.00 ಗಂಟೆಯವರೆಗೆ ವಿಟ್ಲ ಠಾಣಾ ಆವರಣದಲ್ಲಿ ಪರಿಶೀಲಿಸಿರುತ್ತೇನೆ . ಸಮಯವನ್ನು ದೃಡಪತ್ರದಲ್ಲಿ ನಮೂದಿಸಿರುವುದಿಲ್ಲ . ಆ ಸಂದರ್ಭದಲ್ಲಿ ಕೋವಿಡ್ ಅಸ್ತಿತ್ವದಲ್ಲಿ ಇತ್ತು. ವಿಟ್ಲ ಠಾಣೆಯನ್ನು ಸೀಲ್ ಡೌನ್ ಮಾಡಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ . ಧನದ ಮಾಂಸ ಬೇರೆ ಸಸ್ಯಹಾರಿ ಪ್ರಾಣಿಗಳ ಮಾಂಸ ಮೇಲ್ನೋಟಕ್ಕೆ ಒಂದೇ ರೀತಿ ಇರುತ್ತದೆ ಎಂದರೆ ಸರಿಯಲ್ಲ . ಪೋಲಿಸರ ಕೋರಿಕೆ ಮೇರೆಗೆ ಯಾವುದೇ ಜಾನುವಾರುಗಳನ್ನು ಮತ್ತು ಚರ್ಮ ಮಾಂಸಗಳನ್ನು ಖುದ್ದಾಗಿ ಪರಿಶೀಲಿಸದೆ ನಿಪಿ-1 ಮತ್ತು ನಿಪಿ-18 ನ್ನು ಪ್ರಕರಣಕ್ಕೆ ಪೂರಕವಾಗಿ ನೀಡಿದ್ದೇನೆ ಎಂದರೆ ಸರಿಯಲ್ಲ . ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

ಮರುವಿಚಾರಣೆಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಲಾಗಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,
ಬಂಟ್ವಾಳ